ಅಲ್ಲಿ, ಬಲಭಾಗದಲ್ಲಿ ಈಗ ಬಾಗಿಲು ಮುಚ್ಚಿದೆ ಅಲ್ವಾ, ಅದರಲ್ಲಿ ಹೋಟೆಲ್ ಇಟ್ಟುಕೊಂಡಿದ್ದರು. ಮಂಡೆಬಿಸಿ ಆದಮೇಲೆ ಹೋಟೆಲ್ ಬಂದ್ ಮಾಡಿ ಅಲ್ಲಿ ದಿನಸಿ, ತರಕಾರಿ, ಕಟ್ಲೆರಿ ಎಲ್ಲ ಚೂರುಪಾರು ಇಟ್ಟುಕೊಂಡು ಕುಳಿತಿದ್ದಾರೆ. ನಮ್ಮಂಥವರಿಗೆ ಆಗುತ್ತದೆ."

'ಆಗದೆ ಏನು? ಹತ್ತು ರೂಪಾಯಿ ಬಟಾಟೆ ಮೂರು ರೂಪಾಯಿಗೆ ಸಿಗುವುದಿದ್ದರೆ ಹುಚ್ಚನಾದರೆ ಏನು, ಹೆಡ್ಡನಾದರೆ ಏನು?' ಎಂದು ಮನಸ್ಸಿನೊಳಗೆ ಸಿಡಿಮಿಡಿಗೊಂಡು ಒಂದು

